**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 3/2010**

**ದೋ.ಸಾ. : 72 ಪ್ರಾ.ಸಾ. : 28**

ಸಾಕ್ಷಿಯ ಹೆಸರು : ದೇವ ಕನ್ನಾ ಗಣಪನ್
ತಂದೆಯ ಹೆಸರು : ಕನ್ನಾ ಗಣಪನ್
ವಯಸ್ಸು : 85 ವರ್ಷ
ಉದ್ಯೋಗ : ರೈತಾಪಿ.
ವಾಸ : ಕಾನಗೋಡು.

**ದಿನಾಂಕಃ 20-09-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಹುಟ್ಟಿದಾಗಿನಿಂದ ಕಾನಗೋಡು ಗ್ರಾಮದಲ್ಲಿ ವಾಸ ಇದ್ದೇನೆ. ಆರೋಪಿಯು ಊರಿನವರು ಆಗಿದ್ದರಿಂದ ಪರಿಚಯ ಇದ್ದಾನೆ. ಆರೋಪಿ ಪಂಚಾಯತಿ ಅಧ್ಯಕ್ಷ ಆಗಿದ್ದ ವಿಚಾರ ನನಗೆ ಗೊತ್ತಿಲ್ಲ. ಆ ಬಗ್ಗೆ ನಾನು ತಲೆ ಹಾಕಿರುವುದಿಲ್ಲ. ಕಾನಗೋಡು ಗ್ರಾಮದಲ್ಲಿ ನನ್ನ ಮನೆ ಇದೆ. ಸ್ವಚ್ಛ ಗ್ರಾಮ ಯೋಜನೆ ಅಡಿಯಲ್ಲಿ 2001-02 ರಲ್ಲಿ ರೂ.20 ಲಕ್ಷ ಮಂಜೂರಾಗಿತ್ತು ಮತ್ತು ಆ ಬಗ್ಗೆ 210 ಫಲಾನುಭವಿಗಳನ್ನು ಆಯ್ಕೆ ಮಾಡಿದ್ದರು ಮತ್ತು ನಾನು ಸಹ ಅದರಲ್ಲಿ ಫಲಾನುಭವಿ ಆಗಿದ್ದೆ ಎನ್ನುವದು ನನಗೆ ಗೊತ್ತಿಲ್ಲ. ನನಗೆ ಸದರಿ ಯೋಜನೆ ಅಡಿಯಲ್ಲಿ ಸಹಾಯ ಧನ ರೂ.3000/- ಅನ್ನು ಪಾವತಿ ಮಾಡಿರುವುದಿಲ್ಲ. ನನಗೆ ಸಹಾಯಧನ ರೂ.3000/- ಬರಬೇಕಿತ್ತು ಎಂಬ ವಿಚಾರವೇ ಗೊತ್ತಿರಲಿಲ್ಲ .

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ವಿಶೇಷ ಸರಕಾರಿ ಅಭಿಯೋಜಕರಿಂದ**

2. 2001-02 ನೇ ಸಾಲಿನಲ್ಲಿ ಸ್ವಚ್ಛ ಗ್ರಾಮ ಯೋಜನೆ ಅಡಿಯಲ್ಲಿ ನಮ್ಮ ಗ್ರಾಮಕ್ಕೆ ಶೌಚಾಲಯ ನಿರ್ಮಾಣಕ್ಕಾಗಿ ರೂ.20 ಲಕ್ಷ್ಯ ಮಂಜೂರಾಗಿತ್ತು ಮತ್ತು ನಾನು ಫಲಾನುಭವಿ ಆಗಿ ಆಯ್ಕೆ ಆಗಿದ್ದೆ ಮತ್ತು ನನಗೆ ಕೊಡಬೇಕಾಗಿದ್ದ ರೂ.3000/- ಸಹಾಯಧನ ಕೊಟ್ಟಿಲ್ಲ

ಮತ್ತು ಆ ಬಗ್ಗೆ ನಾನು ನಿಪಿ–63 ರಂತೆ ಲೋಕಾಯುಕ್ತ ಆರಕ್ಷಕ ನಿರೀಕ್ಷಕರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನ್ನ ಊರಿನವರು ಆಗಿದ್ದರಿಂದ ಅವನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಜಿ ಟಿ ಎನ್ ರವರಿಂದ**

ಏನೂ ಇಲ್ಲ ಎಂದು ಹೇಳಿದ್ದಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ